ಶ್ರೀ ಪಿ.ಜಿ.ಆರ್. ಸಿಂಧ್ಯ:- ಪ್ರತಿಯೊಂದು ತಾಲ್ಲೂಕಿಗೂ ಡಬಲ್ ಡೋರ್‌ನ ಎರಡೆರಡು ಬಸ್ಸುಗಳನ್ನು ಇನ್ನು ನೂರು ದಿನದೊಳಗೆ ಕೊಡುತ್ತೇವೆಂದು ಹೇಳಿದ್ದೇವೆ. ಆಗ ಇವರ ಸಮಸ್ಯೆಗೆ ಸ್ವಲ್ಪ ಮಟ್ಟಿಗೆ ಪರಿಹಾರ ಸಿಕ್ಕಬಹುದೆಂದು ತಿಳಿದುಕೊಂಡಿದ್ದೇನೆ. ಚಿತ್ರದುರ್ಗ ಜಿಲ್ಲೆ ಸಂಪೂರ್ಣವಾಗಿ ರಾಷ್ಟ್ರೀಕರಣವಾಗಿರತಕ್ಕಂಥ ಜಿಲ್ಲೆ ಅಲ್ಲ. ಆದರೂ ಕೂಡ ಮಾನ್ಯ ಸದಸ್ಯರು ಕೇಳಿರುವ ವಿಚಾರದಲ್ಲಿ ಕಾರ್ಯಚರಣೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ:- ಶಿರಸಿಯಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಾಣ

363 (1340) **ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸ್ಥಳವನ್ನು ಯಾವ ವರ್ಷ ಖರೀದಿಸಲಾಗಿದೆ?

ಆ) ಎಷ್ಟು ಹಣಕ್ಕೆ ಖರೀದಿಸಲಾಗಿದೆ?

ಇ) ಕಟ್ಟಡ ಕೆಲಸ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಸದರಿ ಉದ್ದೇಶಕ್ಕಾಗಿ ಸರ್ವೆ ಸಂಖ್ಯೆ 15ರಲ್ಲಿನ 5 ಎಕರೆ ಸರ್ಕಾರಿ ನಿವೇಶನವನ್ನು ದಿನಾಂಕ 7-9-1989ರಂದು ಸ್ವಾಧೀನಕ್ಕೆ ಪಡೆಯಲಾಗಿದೆ.

ಆ) ರೂ. 3,26,136.00 ಗಳನ್ನು ನಿವೇಶನದ ಮೌಲ್ಯದ ಬಾಬ್ತು ಪಾವತಿಸಲಾಗಿದೆ.

ಇ) 1996-97ನೇ ಸಾಲಿನ ಆಯವ್ಯಯದಲ್ಲಿ ಇದನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ:- ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿರ್ಸಿ ಅತ್ಯಂತ ಪ್ರಮುಖವಾದ ಕೇಂದ್ರ. ಇಲ್ಲಿ ಬಸ್ ನಿಲ್ದಾಣ ಬಹಳ ಇಕ್ಕಟ್ಟಾಗಿದೆ. ಮಾನ್ಯ ಸಾರಿಗೆ ಸಚಿವರು ಕೂಡ ಈ ಬಸ್ ನಿಲ್ದಾಣವನ್ನು ಪ್ರತ್ಯಕ್ಷವಾಗಿ ನೋಡಿದ್ದಾರೆ. 1989ನೇ ಇಸವಿಯಲ್ಲೇ ಈ ಬಸ್ ನಿಲ್ದಾಣವನ್ನು ಸ್ಥಳಾಂತರಿಸಬೇಕೆಂದು ಇದಕ್ಕೆ ಬೇಕಾದ ಜಮೀನನ್ನು ಖರೀದಿಸಲಾಗಿದೆ. 3,26,136 ರೂ. ಗಳನ್ನು ಕೊಟ್ಟು 5 ಎಕರೆ ಜಾಗವನ್ನು 89ನೇ ಇಸವಿಯಲ್ಲಿ ಏನು ಖರೀದಿ ಮಾಡಿದ್ದಾರೆ, ಆ ಜಾಗದಲ್ಲಿ ಇದುವರೆಗೂ ಬಸ್ ಸ್ಟ್ಯಾಂಡನ್ನು ಕಟ್ಟುವುದಕ್ಕೆ ವಿಳಂಬ ಮಾಡಿರುವುದಕ್ಕೆ ಕಾರಣವೇನು? ಇಷ್ಟು ಇಕ್ಕಟ್ಟಾದ ಬಸ್ ನಿಲ್ದಾಣದಲ್ಲಿ ದಿನಕ್ಕೆ ನೂರಾರು ಬಸ್ಸುಗಳು, ಬೊಂಬಾಯಿಯಿಂದ ಮಂಗಳೂರಿಗೆ ಹೋಗುವುದು ಇರಬಹುದು, ಅಥವಾ ಇಡೀ ಉತ್ತರ ಕರ್ನಾಟಕದ ಭಾಗದಿಂದ ಧರ್ಮಸ್ಥಳಕ್ಕೆ ಅಥವಾ ಇನ್ನೂ ಬೇರೆ ಬೇರೆ ಪುಣ್ಯ ಕ್ಷೇತ್ರ, ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಬೇಕಾದರೆ ಸಿರಸಿಯ ಮುಖಾಂತರವೇ ಹೋಗುತ್ತವೆ. ಇಂಥ ಪ್ರಮುಖವಾದ ಮತ್ತು ಇಕ್ಕಟ್ಟಾದ ಕೇಂದ್ರಕ್ಕೆ 1996-97 ರ ಆಯವ್ಯಯದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಕ್ರಮ ತೆಗೆದುಕೊಳ್ಳುತ್ತೇವೆ ಎಂದರೆ ಏನು? ಆಯ-

ವ್ಯಯದಲ್ಲಿ ಸೇರಿಸುವುದಕ್ಕೆ ಯಾವ ರೀತಿಯ ಕ್ರಮತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳಿಂದ ವಿವರಗಳನ್ನು ಕೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷರೆ, ವಿಳಂಬಕ್ಕೆ ಕಾರಣ ನಮ್ಮ ಸಾರಿಗೆ ಸಂಸ್ಥೆಯಲ್ಲಿ ಹಣ ಇಲ್ಲದೇ ಇರುವುದು. ಅವರು ಹೇಳಿರತಕ್ಕದ್ದು ನಿಜವಾದ ವಿಚಾರ. 1985, 1986 ಮತ್ತು 1987ನೇ ಇಸವಿಯಲ್ಲಿ ನಾನು ಸಾರಿಗೆ ಮಂತ್ರಿಯಾಗಿದ್ದಾಗ ಸಿರಸಿಗೆ ಹಲವಾರು ಸಾರಿ ಭೇಟಿಕೊಟ್ಟಿದ್ದೇನೆ. ಇದರಲ್ಲಿ ಎರಡು ಕಾರಣಗಳಿವೆ. ಮೊದಲನೆಯದು ಎಂದರೆ ನಮ್ಮ ಸಾರಿಗೆ ಸಂಸ್ಥೆಯಲ್ಲಿ ಹಣ ಇಲ್ಲದೇ ಇರತಕ್ಕದ್ದು, ಇನ್ನೊಂದು ಅಲ್ಲಿರತಕ್ಕ ಬಸ್ ನಿಲ್ದಾಣವನ್ನು ಅಲ್ಲಿಂದ ಸ್ಥಳಾಂತರಿಸುವ ಬಗ್ಗೆ ಕೂಡ ವಿವಾದ ಇತ್ತು. ಇವತ್ತು ನಾನು ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿದಾಗ ಆ ರೀತಿಯ ವಿವಾದಗಳು ಯಾವುದೂ ಇಲ್ಲವೆಂದು ತಿಳಿದುಬಂತು. ಈ ವರ್ಷದಲ್ಲೇ ಈ ಕೆಲಸವನ್ನು ಸೇರಿಸಬೇಕೆಂದು ಇಟ್ಟುಕೊಂಡಿದ್ದೇನೆ. ಹೇಗೆ ಇದನ್ನು ಮಾಡುತ್ತೀರೆಂದು ಮಾನ್ಯ ಸದಸ್ಯರು ಕೇಳಿದ್ದಾರೆ; ನಾನಾದರೂ ಇಷ್ಟು ಮಾತ್ರ ಹೇಳಬಯಸುತ್ತೇನೆ. 1996-97ಕ್ಕೆ ಸಾರಿಗೆ ಸಂಸ್ಥೆಯ ಬಜೆಟ್ ಏನು ಮಾಡಿದ್ದಾರೆ ಅದರಲ್ಲಿ ಸಿರಸಿ ಬಸ್ ನಿಲ್ದಾಣವನ್ನು ನಿರ್ಮಿಸಲು ಎಂದು ಹಣವನ್ನೇನೂ ಒದಗಿಸಿಲ್ಲ. ಆದರೂ ಬೇರೆ ಇನ್ನಾವುದಾದರೂ ರೀತಿಯಲ್ಲಿ ಹಣವನ್ನು ಸಂಗ್ರಹಿಸಿ ಈ ಕೆಲಸವನ್ನು ಈ ವರ್ಷ ಪ್ರಾರಂಭ ಮಾಡಬೇಕೆಂದು ಇದ್ದೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ:- ಈಗಾಗಲೇ ಸಾಕಷ್ಟು ವಿಳಂಬವಾಗಿದೆ. ಈಗಲೂ ಇದಕ್ಕೆ ಬೇರೆ ರೀತಿಯಲ್ಲಿ ಹಣವನ್ನು ಸಂಗ್ರಹಿಸಿ ಈ ವರ್ಷವೇ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ ಸಂತೋಷ. ಮಾನ್ಯ ಸಚಿವರಲ್ಲಿ ನಾನು ನಿರ್ದಿಷ್ಟವಾಗಿ ಕೇಳುವುದಾದರೂ ಇಷ್ಟೆ. ಈ ಮಳೆಗಾಲ ಮುಗಿದ ಕೂಡಲೇ ಅಂದರೆ ಸೆಪ್ಟಂಬರ್‌ನಲ್ಲಿ ಅಲ್ಲಿ ಕೊನೇ ಪಕ್ಷ ಲೆವಲಿಂಗ್ ಮಾಡಿಸುವುದು, ಕಾಂಪೌಂಡ್ ಹಾಕಿಸುವುದು, ಇಂಥ ಕೆಲಸವನ್ನಾದರೂ ಮಾಡಿಸಿದರೆ ನಮ್ಮ ಜಿಲ್ಲೆಯ ಜನರಿಗೆ, ಸಿರಸಿಯ ಜನರಿಗೆ ಒಂದು ವಿಶ್ವಾಸ ಬರುತ್ತದೆ. ಈ ಬಸ್ ನಿಲ್ದಾಣ ಇಲ್ಲಿ ಆಗುತ್ತದೆಂದು ನಂಬಿಕೆ ಬರುತ್ತದೆ. ಏಕೆಂದರೆ ಈಗಾಗಲೇ ಇವರ ಬಗ್ಗೆ ವಿಶ್ವಾಸವೇ ಹೊರಟುಹೋಗಿದೆ. ಆದ್ದರಿಂದ ಅಲ್ಲಿ ಲೆವೆಲಿಂಗ್ ಮಾಡಿಸುವುದು, ಕಾಂಪೌಂಡ್ ಮಾಡುವುದು, ಇಂಥ ಸಣ್ಣಪುಟ್ಟ ಕೆಲಸಗಳನ್ನಾದರೂ ತಕ್ಷಣದಲ್ಲಿ ತೆಗೆದುಕೊಳ್ಳುವುದಕ್ಕೆ ಮಾನ್ಯ ಸಚಿವರು ಮನಸ್ಸು ಮಾಡುತ್ತಾರೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇದು ಕೇಳಬೇಕಾದ ಮಾತೇ. ಆದರೆ ಕೆ.ಎಸ್.ಆರ್.ಟಿ.ಸಿ.ಯ ಬಗ್ಗೆ ನನಗೇ ವಿಶ್ವಾಸ ಇಲ್ಲದಿರುವಾಗ ಇನ್ನು ಇವರಿಗೆ ಹೇಗೆ ಹೇಳುವುದು? ಕೆ.ಎಸ್.ಆರ್.ಟಿ.ಸಿ.ಯ ಹಣಕಾಸಿನ ಪರಿಸ್ಥಿತಿ ನಿಜವಾಗಿಯೂ ಕೆಟ್ಟುಹೋಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ:- ಹಾಗಾದರೆ, ಇವರು ಈ ಕೆಲಸವನ್ನು ಮಾಡುತ್ತಾರೆಂಬ ಬಗ್ಗೆ ನಾನಾದರೂ ಹೇಗೆ ವಿಶ್ವಾಸವನ್ನು ಇಡುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಹೇಳುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಬುದ್ಧಿವಂತರು ಉತ್ತರ ಕೊಡುವುದೇ ಹೀಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅವರಿಗಿಂತ ನಾನೇನೂ ಬುದ್ಧಿವಂತನಲ್ಲ. ಅದು ಏನೇ ಇರಲಿ. ನಮ್ಮಲ್ಲಿ ದುಡ್ಡಿಲ್ಲವೆಂದು ಹೇಳಬಯಸುತ್ತೇನೆ. ಇವತ್ತು ಕೆ.ಎಸ್.ಆರ್.ಟಿ.ಸಿ. ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಎಂದರೆ 16 ಕೋಟಿ ರೂಪಾಯಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ನಿನ ಬಾಕಿ ಇದೆ. ಸ್ಪೇರ್ ಪಾರ್ಟ್ಸ್‌ಗೆ 16 ಕೋಟಿ ರೂಪಾಯಿ ಬಾಕಿ ಇದೆ. ಎಲ್ಲಾ ಬಾಕಿ ಒಟ್ಟು 60 ಕೋಟಿ ಇದೆ. ನಿನ್ನೆ ರಾತ್ರಿ ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆದಿದ್ದರು ಇದನ್ನು ಹೇಗೆ ಮಾಡುವುದು ಎಂದು. ಯಾವುದೇ ಡಿಪೋದಲ್ಲಿ ಎಲ್ಲಿ ಹೋಗಿ ಕೇಳಿದರೂ ಸ್ಪೇರ್ ಪಾರ್ಟ್ಸ್ ಇಲ್ಲ, ಟೈರ್ ಇಲ್ಲ, ಟ್ಯೂಬ್ ಇಲ್ಲವೆಂದು ಹೇಳುತ್ತಾರೆ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ 15 ಕೋಟಿ ರೂಪಾಯಿಗಳನ್ನು ಕೆ.ಎಸ್.ಆರ್.ಟಿ.ಸಿ.ಗೆ ವಿಶೇಷವಾಗಿ ಕೊಡಲಿಕ್ಕೆ ಒಪ್ಪಿದ್ದಾರೆಂದು ಹೇಳುವುದಕ್ಕೆ ಸಂತೋಷವಾಗುತ್ತದೆ. ಈ ತಿಂಗಳಲ್ಲಿ 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಪರ್ ಡೇ ಕಲೆಕ್ಷನ್ ಹೆಚ್ಚಿಗೆ ಮಾಡುವುದಕ್ಕೆ ಶ್ರೀ ಬೀಳಗಿಯವರು ಮಾಡಿದ ಪ್ರಯತ್ನವನ್ನು ಮುಂದುವರಿಸಿದ್ದೇವೆ. ಸ್ವಲ್ಪ ಹಣಕಾಸಿನ ಪರಿಸ್ಥಿತಿ ಈ ವರ್ಷ ಉತ್ತಮವಾಗಬಹುದೆಂಬ ಆಶಾಭಾವನೆಯನ್ನು ಇಟ್ಟುಕೊಂಡಿದ್ದೇನೆ. ಇದಕ್ಕಾಗಿ ನಾನು ಅವರಿಗೆ ಖಾಸಗಿಯಾಗಿ ಹೇಳಿದ್ದೇನೆ, ಪ್ರಾಮಾಣಿಕವಾಗಿ ಹೇಳಿದ್ದೇನೆ. ಸಿರಸಿಯಲ್ಲಿ ಬಸ್ ಸ್ಟಾಂಡ್ ಕಟ್ಟುವುದಕ್ಕೆ ನಮ್ಮ ಕಾಲದಲ್ಲಿ ಸಾಧ್ಯವಾದರೆ ಅವರಷ್ಟೇ ಸಂತೋಷ ನನಗೂ ಆಗುತ್ತದೆ. ಎಲ್ಲವೂ ಹಣಕಾಸಿನ ಪರಿಸ್ಥಿತಿ ಮೇಲೆ ಅವಲಂಬಿಸಿರುತ್ತದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ:- ಸ್ಪಷ್ಟವಾಗಿ ಹೇಳಿದ್ದಾರೆ ಸಂತೋಷ. 15 ದಿನದ ಹಿಂದೆ ನಾನು ಸಚಿವರ ಗಮನಕ್ಕೆ ತಂದೆ. ಬಸ್ ಸ್ಟಾಂಡ್ ಇಕ್ಕಟ್ಟಾಗಿರುವುದರಿಂದ ಒಬ್ಬರು ಬಸ್ ಹಿಂತೆಗೆದು ಕೊಳ್ಳುವಾಗ ತೀರಿಹೋದರು. ಈ ರೀತಿ ಅಪಘಾತಗಳು ಆಗಾಗ ಆಗುತ್ತಿವೆ. ಹಾಗಾಗಿ 15 ಕೋಟಿ ರೂಪಾಯಿಗಳನ್ನು ನಿನ್ನೆ ರಾತ್ರಿ ಮಾನ್ಯ ಮುಖ್ಯಮಂತ್ರಿಗಳು ಏನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ, ಆದರಲ್ಲಿ ನಮ್ಮ ಬಸ್ ಸ್ಟ್ಯಾಂಡ್ ಕಟ್ಟಲು ಹಣವನ್ನು ಬಿಡುಗಡೆ ಮಾಡಿಕೊಡಿ ಎಂದು ವಿನಂತಿ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಡೀಸಲ್ ಇಲ್ಲ, ಟೈರ್ ಇಲ್ಲ, ಟ್ಯೂಬ್ ಇಲ್ಲ ಈ ರೀತಿ ಪಟ್ಟಿ ಬೆಳೆದಿದೆ; ಅದನ್ನೆಲ್ಲಾ ಸರಿದೂಗಿಸುವುದಕ್ಕೆ 15 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ವರ್ಷ ಮಾರ್ಚ್ ಒಳಗೆ ಸಿರಸಿಯಲ್ಲಿ ಬಸ್ ಸ್ಟ್ಯಾಂಡ್ ಕಟ್ಟುವ ಕೆಲಸ ಪ್ರಾರಂಭ ಮಾಡುವುದಕ್ಕೆ ನಾನು ನಿಮಗೆ ಭರವಸೆ ಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು:- ಶ್ರೀನಿವಾಸ್ ಅವರು ಹಾಜರಿಲ್ಲ. ಈ ಪ್ರಶ್ನೆ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರುವುದರಿಂದ ನನಗೆ ಉಪಪ್ರಶ್ನೆ ಹಾಕಲು ಅವಕಾಶ ನೀಡಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:- ಆ ರೀತಿ ಕೇಳುವುದಕ್ಕಾಗುವುದಿಲ್ಲ.

ವಿಷಯ:- ಕೊಡಗು ಜಿಲ್ಲೆಯಲ್ಲಿ ಸರ್ವೇಯರ್‌ಗಳ ನೇಮಕಾತಿ.

366 (2263) ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ? ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಆ) ಒಂದೊಂದು ಹೋಬಳಿಗೆ ಒಬ್ಬೊಬ್ಬ ಸರ್ವೇಯರ್‌ರನ್ನು ನೇಮಿಸುವ ಉದ್ದೇಶ ಸರ್ಕಾರದ ಮುಂದಿದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) ಕೊಡಗು ಜಿಲ್ಲೆಯಲ್ಲಿ 18 ಎರಡನೇ ದರ್ಜೆ ಭೂಮಾಪಕರ ಹುದ್ದೆಗಳು ಖಾಲಿ ಇರುತ್ತವೆ. ಖಾಲಿ ಹುದ್ದೆಗಳನ್ನು ಶೀಘ್ರದಲ್ಲಿಯೇ ತುಂಬಲಾಗುವುದು.

ಆ) ಹೌದು. ಒಂದು ಹೋಬಳಿಗೆ ಒಬ್ಬ ಸರ್ವೇಯರ್‌ರನ್ನು ನೇಮಕ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ಎ.ಪಿ. ಅಪ್ಪಚ್ಚು ರಂಜನ್:- ಕೊಡಗಿನಲ್ಲಿ ಹೋಬಳಿಗೆ ಒಂದು ಸರ್ವೆಯರ್ ರೀತಿ, ಸರ್ವೇಯರ್ಸ್ ಕೊಡುತ್ತೀರಾ ಎಂದು ಕೇಳಿದ್ದೆ, ಕೊಡುತ್ತೇವೆಂದು ಹೇಳಿದ್ದಾರೆ. ಖಾಲಿ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ ಎಂದು ಕೇಳಿದ್ದೆ. ಆದಷ್ಟು ಶೀಘ್ರವಾಗಿ ತುಂಬುತ್ತೇವೆಂದು ಹೇಳಿದ್ದಾರೆ. ಕೊಡಗಿನಲ್ಲಿ ರೀಸರ್ವೆ ಆಫೀಸ್‌ಗೆ ಶ್ರೀ ಬಸವಲಿಂಗಪ್ಪನವರ ಕಾಲದಲ್ಲಿ ಆದೇಶ ಮಾಡಿ ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅದನ್ನು ಅಲ್ಲೇ ಬಿಟ್ಟು ಹೋಗಿದ್ದಾರೆ. ಇದಕ್ಕೆ ಕಾರಣವೇನು? ರೀಸರ್ವೆ ಏನಿದೆ ಅದನ್ನು ವಾಪಸ್ಸು ತರುತ್ತೀರೋ? ಒಂದು ಕೋಟಿ ರೂಪಾಯಿ ಖರ್ಚು ಮಾಡಿದ್ದನ್ನು ಯಾವ ಕೈಯಿಂದ ವಸೂಲ್ಮಾಡುತ್ತೀರಿ? ಇದು ಸರ್ಕಾರಕ್ಕೆ ಲಾಸ್ ಆಗಲಿಲ್ಲವೇ?

ಶ್ರೀ ರಮೇಶ್ ಸಿ. ಜಿಗಜಿಣಗಿ:- ಅವರು ಕೇಳಿರತಕ್ಕ ಪ್ರಶ್ನೆಗೂ ಮೂಲ ಪ್ರಶ್ನೆಗೂ ಯಾವುದೇ ಸಂಬಂಧ ಇಲ್ಲ. ಬೇರೆ ಪ್ರಶ್ನೆ ಕೇಳಲಿ. ವಿವರಗಳನ್ನು ತರಿಸಿಕೊಂಡು ಮಾನ್ಯ ಸದಸ್ಯರಿಗೆ ಉತ್ತರ ಹೇಳುತ್ತೇನೆ. ಅವರು ಎರಡನೇ ದರ್ಜೆ ಸರ್ವೇಯರ್ 18 ಹುದ್ದೆಗಳು ಖಾಲಿ ಇವೆ, ಯಾವಾಗ ತುಂಬುತ್ತೀರೆಂದು ಕೇಳಿದ್ದಾರೆ. ಈ ತಿಂಗಳ ಕೊನೆಯೊಳಗೆ ತರಬೇತಿ ಮುಗಿಯುತ್ತದೆ, ಒಂದು ಸಾವಿರ ಅಭ್ಯರ್ಥಿಗಳನ್ನು ಭರ್ತಿ ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಈ ತಿಂಗಳ 30ರಲ್ಲಿ ತರಬೇತಿ ಮುಗಿಯುತ್ತದೆ, ಮುಂದಿನ ತಿಂಗಳ 15 ರೊಳಗೆ ಎಲ್ಲಾ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಪ್ರಶ್ನೆ ಕಂದಾಯ ಮಂತ್ರಿಗಳಿಗೆ ಸಂಬಂಧಪಟ್ಟಿದ್ದು. ತಮ್ಮ